ಅಧ್ಯಕ್ಷರು:- ಕಂದಾಯ ಮಂತ್ರಿಗಳು ಬಂದ ಮೇಲೆ ಡಿ.ಸಿ. ಮತ್ತು ಎ.ಸಿ.ಯವರನ್ನು ಕರೆಸಿಕೊಂಡು ವಿವರ ತರಿಸಿ ಅವರು ಯಾರು ಸ್ಟೇ ಕೇಳಿದರು ಸ್ಟೇ ಕೇಳುವಾಗ ರೆಕಾರ್ಡಿನಲ್ಲಿ ಇದನ್ನು ಗುಂಡು ತೋಪು ಎಂದು ತೋರಿಸಿದ್ದಾರೋ ಇಲ್ಲವೇ ಗುಂಡು ತೋಪು ಎಂದು ತೋರಿಸಿದ್ದರೂ ಕೂಡ ಇಲ್ಲಿ ಸ್ಟೇ ಕೋಟ್ಟಿದ್ದಾರೆಯೇ ಎಂದು ನೋಡಿಕೊಂಡು ಆಮೇಲೆ ಕ್ರಮ ತೆಗೆದುಕೊಳ್ಳಬೇಕು. ಒಂದು ವೇಳೆ ಗುಂಡು ತೋಪು ಎಂದು ನಮೂದು ಮಾಡಿದ್ದರೂ ಕೂಡ ಎ.ಸಿ. ಸ್ಟೇ ಕೊಟ್ಟಿದ್ದರೆ ಅದು ತಪ್ಪಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ದಿನಾಂಕ 5-2-92ರಂದು ಇವರು ಹೋದಾಗ ತಹಸೀಲ್ದಾರ್‌ರವರು ವಜಾ ಮಾಡಿದ್ದಾರೆ.

ಅಧ್ಯಕ್ಷರು:- ಕಂದಾಯ ಮಂತ್ರಿಗಳು ನೀವು ಇಬ್ಬರೂ ಕುಳಿತು ಇದರ ಬಗ್ಗೆ ವಿಚಾರ ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ:- ತಾವು ಹೇಳುತ್ತಿರುವುದು ನಿಜಕ್ಕೂ ಸರಿಯಾಗಿದೆ. ಏಕೆಂದರೆ ತಹಸೀಲ್ದಾರರು ಬಗರ್ ಹುಕುಂ ಸಮಿತಿ ಮುಂದೆ ಅರ್ಜಿ ಹಾಕಿದ್ದನ್ನು ವಜಾ ಮಾಡಿದ್ದಾರೆ. ಹಾಗೆ ವಜಾ ಮಾಡಿರುವುದರ ಮೇಲೆ ಉಪ ವಿಭಾಗಾಧಿಕಾರಿಯವರು ಸ್ಟೇ ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಜಿಲ್ಲಾಧಿಕಾರಿಗಳ ಹಂತದಲ್ಲಿ ವಿವರವಾದ ವರದಿ ತರಿಸುತ್ತೇನೆ. ಕಂದಾಯ ಸಚಿವರನ್ನು ಕೂಡಾ ಕೇಳಿಕೊಳ್ಳುತ್ತೇನೆ. ಕಾನೂನು ಬಾಹಿರವಾಗಿ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ತಿಳಿಸುತ್ತೇನೆ.

ಅಧ್ಯಕ್ಷರು:- ಸದನಕ್ಕೆ ತಿಳಿಸುತ್ತಾರೆ.

ವಿಷಯ:- ಅಕ್ರಮ ಸಾಗುವಳಿಯನ್ನು ಕ್ರಮಬದ್ಧಗೊಳಿಸುವುದು.

297 (2040) **ಶ್ರೀ ಎಂ. ಚಂದ್ರಪ್ಪ (ಭರಮಸಾಗರ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991ರಿಂದ ಈಚೆಗೆ ಸರ್ಕಾರಿ ಭೂಮಿಯನ್ನು ಉಳಿಮೆ ಮಾಡಿರುವ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಲು ಅವಕಾಶ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಶೇಕಡ 60 ರಿಂದ 70 ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ಜನಾಂಗದವರು ಭೂಮಿಯನ್ನು ಉಳುಮೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅರ್ಹ ಫಲಾನುಭವಿಗಳಿಗೆ ಸರ್ಕಾರಕ್ಕೆ ಅರ್ಜಿ ಸಲ್ಲಿಸುವ ಅವಕಾಶ ಯಾವಾಗಿನಿಂದ ಮಾಡ ಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ಹೌದು

ಆ) ಇಲ್ಲ

ಇ) ಇಲ್ಲ

ಶ್ರೀ ಎಂ. ಚಂದ್ರಪ್ಪ:- ಮಾನ್ಯ ಅಧ್ಯಕ್ಷರೇ, ಸುಮಾರು ವರ್ಷಗಳಿಂದ ಈ ಬಡತನ ರೇಖೆಯಿಂದ ಕೆಳಗಡೆ ಇರುವ ಜನ ಇವತ್ತು ಸರ್ಕಾರದ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಬಂದಿರುವ ಜನ ಅವರಿಗೆ ಜಮೀನು ಕೊಡುವ ಬಗ್ಗೆ ಸರ್ಕಾರ ಒಂದು ತೀರ್ಮಾನ ಮಾಡಿ 1991 ರ ಆಕ್ಟೋಬರ್‌ನಲ್ಲಿ ಒಂದು ಪ್ರಕಟಣೆಯನ್ನು ಹೊರಡಿಸಿತು ಅದೇ ರೀತಿ ಸಾಕಷ್ಟು ಪ್ರಚಾರ ಇಲ್ಲದೆ ಅರ್ಧಕ್ಕರ್ಧ ಜನರು ಅರ್ಜಿ ಹಾಕಿಲ್ಲದಂಥವರು ಸುಮಾರು ಇಪ್ಪತ್ತು ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಇವತ್ತು ಅರ್ಧಕ್ಕೆ ಅರ್ಧ ಜನ ಅರ್ಜಿ ಹಾಕಲಾರದ್ದರಿಂದ ಅವರಿಗೆ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವ ವ್ಯವಸ್ಥೆ ಇವತ್ತು ಇಲ್ಲದಂತಾಗಿದೆ. ಆದ್ದರಿಂದ ಸರ್ಕಾರ ಮತ್ತೊಂದು ಸಾರಿ ಪ್ರಚಾರ ಮಾಡಿ ಹಳ್ಳಿಯಲ್ಲಿರುವ ಜನರಿಗೆ ಗೊತ್ತಾದರೆ ಅವರು ಮತ್ತೊಮ್ಮೆ ಅರ್ಜಿ ಸಲ್ಲಿಸಿ ಅವರು ಜಮೀನು ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು ನಾನು ಕೇಳಿದ್ದಕ್ಕೆ ಸರ್ಕಾರ 'ಇಲ್ಲ' ಎನ್ನುವ ಉತ್ತರವನ್ನು ಕೊಟ್ಟಿದೆ. ಅದರ ಬಗ್ಗೆ ದಯವಿಟ್ಟು ವ್ಯವಸ್ಥೆ ಮಾಡಿಕೊಡಬೇಕೆಂದು ತಮ್ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- (ಪ್ರಾಥಾಮಿಕ ಶಿಕ್ಷಣ ಸಚಿವರು) (ಕಂದಾಯ ಸಚಿವರ ಪರವಾಗಿ)**:-** ಮಾನ್ಯ ಸಭಾಧ್ಯಕ್ಷರೇ, 19-9-91ರಲ್ಲಿ ಈ ಆದೇಶ ಹೊರಡಿಸಿದ ಸಂದರ್ಭದಲ್ಲಿ ಒಟ್ಟು ಸ್ವೀಕೃತವಾಗಿರುವ ಅರ್ಜಿಗಳು 10,86,826. 25,80,214 ಎಕರೆಗಳ ವಿಸ್ತೀರ್ಣಕ್ಕೆ ಅವರು ಅರ್ಜಿಗಳನ್ನು ಕೊಟ್ಟಿರುವುದು. ಈ ಪೈಕಿ ಪರಿಶಿಷ್ಟ ಜಾತಿ ವರ್ಗದವರಿಗೆ ಸೇರಿರುವುದು 31,562 ಅರ್ಜಿಗಳು ಬಂದಿರುವುದು. 8,14,264 ಎಕರೆಗಳಿಗೆ ಇಷ್ಟು ಅರ್ಜಿ ಬಂದಿರುವುದು. ಆ ಪೈಕಿ 80,339 ಅರ್ಜಿಗಳನ್ನು ವಿಲೇವಾರಿ ಮಾಡಿ ಮಂಜೂರು ಮಾಡಿದ್ದಾರೆ. ಬಾಕಿ ಉಳಿದಿರುವುದು 1,51,736 ಅರ್ಜಿಗಳಿವೆ ಸ್ನೇಹಿತರು ಹೇಳಿದಹಾಗೆ ಒಂದು ಡ್ಯೂ ಡೇಟನ್ನು ಕೊಟ್ಟಿತ್ತು. ಆ ಒಂದು ಡ್ಯೂ ಡೇಟ್ ಒಳಗೆ ಈ ರಾಜ್ಯದಲ್ಲಿ ಯಾರ್ಯಾರು ಬಗರ್‌ಹುಕುಂ ಮಾಡಿರುವ ಜನರು ಇದ್ದಾರೆ ಅವರಿಗೆಲ್ಲಾ ಅರ್ಜಿ ಕೊಡುವ ಒಂದು ಡ್ಯೂ ಡೇಟ್ ಇತ್ತು. Cut off Date ಅಂತ ಅದನ್ನು ಒಂದು ವೇಳೆ ಎಕ್ಸ್‌ಟೆಂಡ್ ಮಾಡಿದರೆ ಅನೇಕ ಜನರು ಬಗರ್‌ಹುಕುಂ ಮಾಡಿದ್ದೇವೆ ಎಂದು ಹೇಳಿ ಅರ್ಜಿ ಕೊಡುವ ಸಂಪ್ರದಾಯ ಬಂದರೂ ಬರಬಹುದು ಎಂದು ಹೇಳಿ ಸರ್ಕಾರ ನಡೆಸುತ್ತಿರುವವರಿಗೆ ಅನಿಸುತ್ತದೆ. ಇದರ ವಿಮರ್ಶೆ ಮಾಡಿ ನೋಡಿ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬಹುದು ಎನ್ನುವುದರ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತಾರೆ ಎಂದು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಚಂದ್ರಪ್ಪ:- ಮಾನ್ಯ ಅಧ್ಯಕ್ಷರೇ, 1991ಕ್ಕೆ ಮುಂಚೆ ಎಷ್ಟು ಜನ ಬಗರ್ ಹುಕುಂ ಮಾಡುವವರು ಅರ್ಜಿಗಳನ್ನು ಹಾಕಿದ್ದರೋ ಅವರು ಸಾಗುವಳಿ ಮಾಡುತ್ತಿದ್ದಾರೆ ಎನ್ನುವುದನ್ನು

ತಹಸೀಲ್ದಾರ್‌ರಿಂದ ಮತ್ತು ಡಿ.ಸಿ.ರವರಿಂದ ವರದಿ ತರಿಸಿಕೊಂಡು ಅದಕ್ಕಿಂತ ಮುಂಚೆ ಅವರು ಜಮೀನು ಉಳುಮೆ ಮಾಡುತ್ತಿದ್ದರು ಎಂದರೆ ಮಾತ್ರ ಅವರಿಗೆ ಕೊಡುವ ವ್ಯವಸ್ಥೆಯನ್ನು ಮಾಡಲು ಅವರಿಗೆ ಮಾತ್ರ ಕಾಲ್‌ಫರ್ ಮಾಡುವ ವ್ಯವಸ್ಥೆಯನ್ನು ಸರ್ಕಾರ ಮಾಡಲಿ ಎಂದು ತಮ್ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯ ಕರ್ನಾಟಕ ಗೃಹ ಮಂಡಳಿಯ ಮನೆಗಳು.

298 (2146) **ಶ್ರೀ ಯು.ಆರ್. ಸಭಾಪತಿ:-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆ-ಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕರ್ನಾಟಕ ಗೃಹ ಮಂಡಳಿ ಕಟ್ಟಿರುವ ಮನೆಗಳು ಎಷ್ಟು? ಯಾವ ಯಾವ ಊರಿನಲ್ಲಿ ಎಷ್ಟು ಮನೆಗಳಿವೆ ? (ವಿವರ ನೀಡುವುದು).

ಆ) ಇನ್ನು ಉಳಿದಿರುವ ಮನೆಗಳು ಎಷ್ಟು? ಇದನ್ನು ಯಾವಾಗ ಹಂಚಿಕೆ ಮಾಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಕರ್ನಾಟಕ ಗೃಹ ಮಂಡಳಿಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟ್ಟಿರುವ ಮನೆಗಳು ಈ ಕೆಳ-ಕಂಡಂತೆ ಇರುತ್ತವೆ.

	ಸ್ಥಳ	ಮನೆಯ ವರ್ಗ	ರಾಜ್ಯ ಯೋಜನೆ	ಹುಡ್ಕೋ ಯೋಜನೆ	ಒಟ್ಟು
1.	ಕುಂಪೆತಬೈಲ್	ಇಡಬ್ಲ್ಯೂಎಸ್	-	50	50
	ಮಂಗಳೂರು	ಎಲ್‌ಐಜಿ	49	30	79
		ಎಂಐಜಿ	23	54	77
			72	134	206
2.	ಮರಕದ	ಇಡಬ್ಲ್ಯೂಎಸ್	-	190	190
	ಮಂಗಳೂರು	ಎಲ್‌ಐಜಿ	-	094	094
		ಎಂಐಜಿ	-	38	38
			-	322	322
3.	ಪದವುಶಕ್ತಿನಗರ	ಎಲ್‌ಐಜಿ	-	24	24
	ಮಂಗಳೂರು	ಎಂಐಜಿ	-	13	13
		ಎಸ್‌ಆರ್‌ಹೆಚ್‌ಎಸ್	96	-	96
			96	37	133